ಶ್ರೀ ಎಸ್. ಎಂ. ಕೃಷ್ಣ.—ಪರಿಶೀಲನೆ ಅಂತಿಮ ಘಟ್ಟವನ್ನು ಮುಟ್ಟಿದೆ. ಹೆಚ್ಚು ನಷ್ಟ ಪಡುತ್ತಿರುವ ಕಾರ್ಖಾನೆಗಳಲ್ಲಿ ನಷ್ಟದ ಪ್ರಮಾಣ ಕಡಿಮೆಯಾಗುತ್ತಿದೆ. ಕೆಲವು ಕಾರ್ಖಾನೆಗಳು ನಷ್ಟದಲ್ಲಿ ನಡೆಯುತ್ತಿದ್ದು ಅವು ಲಾಭ ಗಳಿಸತಕ್ಕ ಹಾದಿಯಲ್ಲಿ ನಿಂತಿವೆ. ಇನ್ನು ಕೆಲವು ಕಾರ್ಖಾನೆಗಳು ಲಾಭ ಖಡಾಖಡಿಯಾಗಿ ಈಗಾಗಲೇ ಪಡೆಯುತ್ತಿವೆ. ಮುಖ್ಯವಾಗಿ ಕೆಲವು ಕಾರ್ಖಾನೆಗಳು, ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ, ಸೋಪ್ ಫ್ಯಾಕ್ಟರಿ, ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್, ಗವರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ, ಹಾಸನದ ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಇವುಗಳನ್ನು ಕಂಪೆನಿಗಳನ್ನಾಗಿ ಮಾಡಲು ಕನ್ಸಲ್ಟೆನ್ಸಿ ರಿಪೋರ್ಟ್, ಫೀಸಿಬಿಲಿಟಿ ರಿಪೋರ್ಟ್, ಡೈವರ್ಸಿಫಿಕೇಷನ್ ರಿಪೋರ್ಟ್ ಮೂರು ಬಂದಿದ್ದು ಇವುಗಳನ್ನು ಲಾಭದಾಯಕವಾದ ಕಾರ್ಖಾನೆಗಳನ್ನಾಗಿ ಪರಿವರ್ತನೆ ಮಾಡಲು ನಾವು ಏರ್ಪಾಡುಗಳನ್ನು ಮಾಡುತ್ತಿದ್ದೇವೆ. ನನ್ನ ಅಂದಾಜಿನ ಪ್ರಕಾರ ಇನ್ನು ಒಂದು ವರ್ಷದಲ್ಲಿ ಮೂರು ಕಾರ್ಖಾನೆಗಳು ಬ್ರೇಕ್ ಈವನ್ ಪಾಯಿಂಟಿಗೆ ಬಂದು ಮೂರು ಕಾರ್ಖಾನೆಗಳು ಲಾಭ ಮಾಡುವುದಕ್ಕೆ ಭೂಮಿಕೆ ಸಿದ್ಧವಾಗಿದೆ.

ಶ್ರೀ ಸಿ. ಬೈರೇಗೌಡ.—ಐದನೇ ಯೋಜನೆಯಲ್ಲಿ ಕಾರ್ಖಾನೆಗಳಲ್ಲಿ ಎಷ್ಟು ಬಂಡವಾಳವನ್ನು ಎಂದರೆ ಇನ್‌ಸ್ಟಾಲ್ಡ್ ಕ್ಯಪಾಸಿಟಿಯನ್ನು ಜಾಸ್ತಿ ಮಾಡಬೇಕೆಂದು ಸರಕಾರ ಯೋಚನೆ ಮಾಡುತ್ತಿದೆ?

ಶ್ರೀ ಎಸ್. ಎಂ. ಕೃಷ್ಣ.—ಸರಕಾರಿ ಕ್ಷೇತ್ರದಲ್ಲಿ ಹೆಚ್ಚು ಬಂಡವಾಳವನ್ನು ಯೂಟಿಲೈಸು ಮಾಡಲು ಅಥವಾ ಸರಕಾರ ಬಂಡವಾಳ ಹೂಡಲು ಸಾಧ್ಯವಾಗುವುದಿಲ್ಲ. ಇದಕ್ಕೆ ಕಾರಣ ಈ ಮಹಾ ಸಭೆಗೇ ಗೊತ್ತಿದೆ. ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಇರಿಗೇಷನ್ ಹಾಗೂ ಪವರು ಪ್ರಾಜೆಕ್ಟ್‌ಗಳಿಗೆ ಹೆಚ್ಚು ಬಂಡವಾಳ ಹಾಕುವ ಅವಶ್ಯತೆ ಇದೆ. ಆದುದರಿಂದ ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚು ಬಂಡವಾಳವನ್ನು ರೂಪಿಸಬೇಕಾದರೆ ಬೇರೆ ಖಾಸಗಿ ಕ್ಷೇತ್ರದಿಂದ ಬರಬೇಕು ಇಲ್ಲವೇ ಜಂಟೀ ಕ್ಷೇತ್ರದಿಂದ ಬಂಡವಾಳ ಹೂಡಿ ಉತ್ಪಾದನೆ ಮಾಡಬೇಕಾಗಿದೆ. The emphasis in the Five Year Plan is going to be to gnerate investment in the public sector to a very great extent. ಇನ್‌ಸ್ಟಾಲಿಂಗ್ ಕ್ಯಾಪಸಿಟಿ ಪ್ರತಿಯೊಂದು ಕೈಗಾರಿಕೆಗೂ ಬೇರೆ ಬೇರೆ ರೀತಿಯಾಗಿವೆ. ಭದ್ರಾವತಿಯ ಕೈಗಾರಿಕೆಯಲ್ಲಿ ಶೇಕಡಾ 55ರಷ್ಟು ಇದೆ. ಇನ್ನಿತರ ಕೆಲವು ಕೈಗಾರಿಕೆಗಳಲ್ಲಿ ಶೇಕಡಾ ಅರವತ್ತು ಇಲ್ಲವೇ ಎಪ್ಪತ್ತರಷ್ಟು ಇದೆ. ಯಾವ ಕಾರ್ಖಾನೆ ಬಗ್ಗೆ ಎಂದು ತಾವು ಕೇಳಿದರೆ ಆಗ ಅದರ ಬಗ್ಗೆ ನಿರ್ದಿಷ್ಟವಾಗಿ ತಿಳಿಸಬಹುದು.

ಶ್ರೀ ಸಿ. ಬೈರೇಗೌಡ.—ರೈತರಿಗೆ ಮುಖ್ಯವಾಗಿ ಬೇಕಾಗಿರುವುದು ರೇಷ್ಮೆ ಕೈಗಾರಿಕೆಗಳು. ಇದರಲ್ಲಿ ನಮ್ಮ ಮುಂದೆ ಇರುವ ಪಟ್ಟಿಯಂತೆ ನೋಡಿದರೆ ಚನ್ನಪಟ್ಟಣದಲ್ಲಿರುವ ರೇಷ್ಮೆ ಕೈಗಾರಿಕೆಯಲ್ಲಿ ಮಾತ್ರ ಸ್ವಲ್ಪ ಲಾಭ ಬಂದಿದೆ. ಇದರ ಇನ್‌ಸ್ಟಾಲ್ಡ್ ಕ್ಯಪಾಸಿಟಿಯನ್ನು ಐದನೇ ಯೋಜನೆಯಲ್ಲಿ ಜಾಸ್ತಿ ಮಾಡಬೇಕೆಂದು ಯೋಚನೆ ಮಾಡಿದ್ದೀರಿ ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ತಿಳಿಸಿದ ಹಾಗೆ ಐದನೇ ಯೋಜನೆಯಲ್ಲಿ ರೇಷ್ಮೆ ಉದ್ಯಮಕ್ಕೆ ಬಹಳ ಹೆಚ್ಚಿನ ಆದ್ಯತೆ ಕೊಡಬೇಕೆಂದು ಇದ್ದಾರೆ. ನಮ್ಮ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ರೇಷ್ಮೆ ಕೈಗಾರಿಕೆಗಳು ಇವೆ. ಇವಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡಲು ಇದಕ್ಕಾಗಿ ಒಂದು ಕಾರ್ಪೊರೇಷನ್ ಮಾಡಬೇಕೆಂದು ಇದೆ. ಇವರಿಂದ ಇವು ಸ್ವಲ್ಪಮಟ್ಟಿಗೆ ಚೆನ್ನಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ ಮತ್ತು ಇದರ ಪರಿಸ್ಥಿತಿ ಕೊಂಚಮಟ್ಟಿಗೆ ಸುಧಾರಣೆಯೂ ಆಗಬಹುದು ಎಂದು ನಾವು ನಿರೀಕ್ಷೆ ಮಾಡುತ್ತಿದ್ದೇವೆ.

DISPOSAL OF APPLICATIONS FOR RENEWAL OF MINING LEASE IN BELLARY DISTRICT.

504. Sri B. SATHYANARAYAN SINGH (Hospet).—

Will the Minister for Industries and Parliamentary Affairs be pleased to state :—

(a) whether it has come to the notice of Government that quite a number of mining lease renewal applications for Iron ore from Bellary District have not been disposed off (The number and names of applications pending) ;

(SRI B. SATHYANARAYANA SINGH)

(b) whether a number of applications for mining leases of Iros ore from Bellary District, where the applicants had already had prospecting licence have not been disposed off (The number of applications so pending) ;

(c) the reasons for this inordinate delay in the disposal of these applications

(d) the number of applications for renewal of mining leases of iron ore from Bellary District renewed during the last one year (the names of the parties so renewed may be furnished) ;

(c) whether a number of revision petitions against the order of the State Government, either refusing to grant or renew mining leases for Iron ore from Bellary District are pending with the Government of India (state the number and names of parties) ?

Sri S. M. KRISHNA (Minister for Industries and Parliamentary Affairs) .—

(a) Yes. List (A) of applications pending is placed on the Table of the House.*

(b) Yes. List (B) of applications pending is placed on the Table of the House.*

(c) Iron ore is a Schedule " A " mineral and the concurrence of Government of India is required before the grant or renewal of the lease.

(d) One List (C) is placed on the Table of the House*

(e) Yes. List (D) is placed on the Table of the House.*

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ಇದರಲ್ಲಿ ಉತ್ತರ ಕೊಟ್ಟಿರುವಂತೆ ರಿಜ್ಯೂಯಲ್ ಅರ್ಜಿಗಳು ಬಹಳ ಇತ್ಯರ್ಥವಾಗದೇ ಹಾಗೇ ಉಳಿದಿರುವುದರಿಂದ ಕಬ್ಬಿಣದ ಅದಿರು ಉತ್ಪಾದನೆ ಮಾಡುವುದು ಕಡಿಮೆಯಾಗುವುದಿಲ್ಲವೇ ? ಇದಕ್ಕಾಗಿ ರಾಜ್ಯ ಸರಕಾರದವರು ಕೇಂದ್ರ ಸರಕಾರಕ್ಕೆ ಇಂತಹ ಅರ್ಜಿಗಳನ್ನು ಬೇಗನೆ ಇತ್ಯರ್ಥ ಮಾಡಲು ಒತ್ತಾಯ ಮಾಡುತ್ತಾರೆಯೇ ?

†ಶ್ರೀ ಎಸ್. ಎಂ. ಕೃಷ್ಣ.—ಇದರಲ್ಲಿರುವ ಅರ್ಜಿಗಳಿಗೆ ಕೇಂದ್ರ ಸರಕಾರದವರ ಕನ್‌ಕರೆನ್ಸು ಪಡೆಯಬೇಕಾಗಿದೆ. ಗಣಿ ಮಾಲೀಕರುಗಳಿಂದ ರಿವಿಷ್ಷನ್ ಪಿಟಿಷನ್‌ಗಳು ಕೇಂದ್ರ ಸರಕಾರದವರಿಗೆ ಹೋಗುತ್ತವೆ. ಆಗ ಕೇಂದ್ರದವರು ರಾಜ್ಯ ಸರಕಾರವನ್ನು ಹಾಗೂ ಗಣಿ ಮಾಲೀಕರನ್ನು ಕರೆಸಿ ವಿಚಾರಗಳನ್ನು ತಿಳಿದು ಆ ನಂತರ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಇದಕ್ಕೋಸ್ಕರ ಕಲವು ವೇಳೆ ಇದರಲ್ಲಿ ನಿಧಾನವಾಗುತ್ತದೆ. ಇದರ ಬಗ್ಗೆ ನಾವೂ ಮತ್ತೆ ಕೇಂದ್ರ ಸರಕಾರದವರ ಗಮನಕ್ಕೆ ತಂದು ಆದಷ್ಟು ಬೇಗ ಇಂತಹ ರಿವಿಷ್ಟನ್ ಪಿಟಿಪನ್‌ಗಳನ್ನು ನೋಡಿ ಕನ್‌ಕರೆನ್ಸು ಕೊಡ ಬೇಕೆಂದು ಅವರ ಮೇಲೆ ಒತ್ತಾಯ ಮಾಡಲು ಪ್ರಯತ್ನ ಮಾಡುತ್ತೇನೆ

*Copies placed in Karnataka Legislature Library *vide* No. 36 dated 24th April 1974.